**2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು**

**S.C.No : 268/2021**

**ಸಾಕ್ಷಿಯನ್ನು ದಿನಾಂಕ 18.8.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಶಿಕುಮಾರ | ಪಿ.ಡಬ್ಲ್ಯೂ-7 |
| ತಂದೆಯ/ಗಂಡನ ಹೆಸರು | : | ತವಸರಯ್ಯ | ಸಿ.ಡಬ್ಲ್ಯೂ-11 |
| ವಯಸ್ಸು | : | 40 | |
| ಉದ್ಯೋಗ | : | ಬಿಲ್ ಕಲೆಕ್ಟರ್, ಮೂಗೂರು ಗ್ರಾಮ ಪಂಚಾಯಿತಿ | |
| ವಾಸಸ್ಥಳ | : | ಮೂಗೂರು | |

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನಾನು 2013 ರಿಂದ ಮೂಗೂರು ಗ್ರಾಮ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ಚಾಸ 10 ರವರು ನಮ್ಮ ಪಂಚಾಯಿತಿಯಲ್ಲಿ ಎಸ್.ಡಿ.ಎ ಆಗಿ ಕೆಲಸ ಮಾಡುತ್ತಿದ್ದಾರೆ. ಈ ಪ್ರಕರಣದಲ್ಲಿ ನನ್ನನ್ನು ಹಾಗೂ ಚಾಸ 10 ಜವರೇಗೌಡ ರವರನ್ನು ಮಹಜರಿಗೆ ಸಾಕ್ಷಿದಾರರಾಗಿ ಹೋಗುವಂತೆ ತಹಶೀಲ್ದಾರ್ ಕಛೇರಿಯಿಂದ ಆದೇಶ ಮಾಡಿದ್ದು ಆ ಕಾರಣ ನಾನು ಮತ್ತು ಜವರೇಗೌಡ ದಿನಾಂಕ 31.8.2021 ರಂದು ಟಿ.ನರಸೀಪುರ ಪೋಲಿಸ್ ಠಾಣೆಗೆ ಹೋಗಿದ್ದೆವು. ಆ ಕಾಲಕ್ಕೆ ನ್ಯಾಯಾಲಯದ ಮುಂದಿರುವ ಆರೋಪಿಯು ಠಾಣೆಯಲ್ಲಿದ್ದ. ಪೋಲಿಸರು

ಆರೋಪಿತನನ್ನು ತೋರಿಸಿ ಆರೋಪಿ ಸ್ಥಳ ತೋರಿಸುತ್ತಾನೆ ಆತನೊಂದಿಗೆ ಹೋಗಿ ಮಹಜರ್ ಮಾಡಬೇಕೆಂದು ತಿಳಿಸಿದರು. ಆ ಕಾಲಕ್ಕೆ ನಾನು, ಜವರೇಗೌಡ, ಆರೋಪಿ ಹಾಗೂ ಪೋಲಿಸರು ಠಾಣೆಯಿಂದ ಮದ್ಯಾಹ್ನ 3.15 ಗಂಟೆಗೆ ಹೊರಟೆವು. ಆಗ ಆರೋಪಿತ ತಾನು ಸ್ಥಳ ತೋರಿಸುವುದಾಗಿ ಕರೆದುಕೊಂಡು ಹೋದನು. ಆ ಕಾಲಕ್ಕೆ ಆರೋಪಿತ ಮೂಗೂರು-ಹೊಸಹಳ್ಳಿ ರಸ್ತೆಯಲ್ಲಿನ ಕಬಿನಿ ಬಲದಂಡೆ 39 ನೇ ಕಾಲುವೆ ಬಳಿ ಇರುವ ನಂಜಯ್ಯನ ಜಮೀನಿಗೆ ಕರೆದುಕೊಂಡು ಹೋಗಿ ಮೃತ ಭಾಗ್ಯಮ್ಮಳ ಮೊಬೈಲ್ ಬೀಸಾಕಿದ್ದ ಸ್ಥಳ ತೋರಿಸಿದ. ಆ ಕಾಲಕ್ಕೆ ಪೋಲಿಸರು ಮೊಬೈಲಿಗೆ ಹುಡುಕಾಡಿದರು, ಆದರೆ ಅಲ್ಲಿ ಗಿಡಗಳು ಬೆಳೆದಿದ್ದರಿಂದ ಮೊಬೈಲ್ ಸಿಗಲಿಲ್ಲ. ಆ ಸ್ಥಳದಲ್ಲಿ ಸಂಜೆ 4 ರಿಂದ 4.45 ರವರೆಗೆ ಮಹಜರ್ ಮಾಡಲಾಯಿತು. ಈಗ ನಾನು ನೋಡುತ್ತಿರುವ ನಿಪಿ13 ಮಹಜರ್ ಅದೇ ಆಗಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು ನಿಪಿ13 ಬಿ ಎಂದು ಗುರುತಿಸಿದೆ. ನಿಪಿ13 ಕ್ಕೆ ನಾನು, ಜವರೇಗೌಡ ಹಾಗೂ ಆರೋಪಿ ಸಹಿ ಹಾಕಿರುತ್ತೇವೆ. ಸ್ಥಳದಲ್ಲಿ ಪೋಟೋ ತೆಗೆಯಲಾಗಿರುತ್ತದೆ. ಈಗ ನಾನು ನೋಡುತ್ತಿರುವ ನಿಪಿ14 ರಿಂದ ನಿಪಿ21 ಪೋಟೋಗಳು ಅದೇ ಇರುತ್ತವೆ. ಆ ಪೊಟೋದಲ್ಲಿ ನಾನು, ಆರೋಪಿ ಮಹೇಶಕುಮಾರ್, ಚಾಸ 10 ಜವರೇಗೌಡ ಮತ್ತು ಸಿಬ್ಬಂದಿ ಇದ್ದಾರೆ.

ನಂತರ ನಂಜಯ್ಯನ ಜಮೀನಿನಿಂದ 70-80 ಮೀಟರ್ ದೂರದಲ್ಲಿರುವ ಸೇತುವೆ ಬಳಿ ಕರೆದುಕೊಂಡು ಹೋಗಿ ಆ ಸ್ಥಳದಲ್ಲಿದ್ದ ಪೈಪಿಗೆ ಮೃತ ಭಾಗ್ಯಮ್ಮಳ ಶವವನ್ನು

ತುರುಕಿರುವುದಾಗಿ ಹೇಳಿದ. ಆ ಪೈಪು 4 ಅಡಿ ಅಗಲವಿತ್ತು. ಆ ಪೈಪನ್ನು ನಾಲೆಯಿಂದ ಜಮೀನಿಗೆ ನೀರು ವಿತರಿಸಲು ಹಾಕಿದ್ದರು. ಸಂಜೆ 5 ರಿಂದ 5.45 ರವರಗೆ ಅಲ್ಲಿ ಮಹಜರ್ ಮಾಡಲಾಯಿತು. ಈಗ ನಾನು ನೋಡುತ್ತಿರುವ ನಿಪಿ22 ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು ನಿಪಿ22 ಬಿ ಎಂದು ಗುರುತಿಸಿದೆ. ಮಹಜರ್ ಮಾಡಿದ ಸ್ಥಳ ಹೊಸಹಳ್ಳಿ-ಮೊಳೆ ರಸ್ತಯ ಬದಿಯಲ್ಲಿರುವ ನಾಲೆ ಬಳಿ ಇದೆ. ನಿಪಿ22 ಕ್ಕೆ ನಾನು, ಜವರೇಗೌಡ ಹಾಗೂ ಆರೋಪಿ ಸಹಿ ಮಾಡಿರುತ್ತೇವೆ. ಈಗ ನಾನು ನೋಡುತ್ತಿರುವ ನಿಪಿ23 ರಿಂದ ನಿಪಿ26 ಪೋಟೋಗಳು ಮಹಜರ್ ಕಾಲಕ್ಕೆ ತೆಗೆದ ಪೊಟೋ ಇರುತ್ತವೆ.

ನಂತರ ಆರೋಪಿತನು ಮೂಗೂರಿನ ಅಂಬೇಡ್ಕರ್ ಕಾಲೋಯಲ್ಲಿರುವ ತನ್ನ ಮನೆಗೆ ಕರೆದುಕೊಂಡ ಹೋದನು. ಅಲ್ಲಿ ಆರೋಪಿತ ಒಂದು ಸೈಕಲ್ ಹಾಗೂ ಗುದ್ದಲಿಯನ್ನು ತೋರಿಸಿ ಅದೇ ಸೈಕಲ್ ಮತ್ತು ಯಲಕೊಟು(ಗುದ್ದಲಿ) ಕೃತ್ಯಕ್ಕೆ ಉಪಯೋಗಿಸಿರುವುದಾಗಿ ತಿಳಿಸಿದ. ಆ ಸೈಕಲ್ ಮತ್ತು ಯಲಕೊಟು(ಗುದ್ದಲಿ) ಪೋಲಿಸರು ವಶಕ್ಕೆ ಪಡೆದರು. ಈಗ ನಾನು ನೋಡುತ್ತಿರುವ ನಿಪಿ27 ರಿಂದ ನಿಪಿ30 ಪೋಟೋದಲ್ಲಿರುವ ಸೈಕಲ್ ಆ ದಿನ ಆರೋಪಿ ಹಾಜರುಪಡಿಸಿದ ಸೈಕಲ್ ಆಗಿರುತ್ತದೆ. ಈಗ ನಾನು ನೋಡುತ್ತಿರುವ ಎಂಓ 11 ಎಂದು ಗುರುತಿಸಿರುವ ಯಲಕೊಟು(ಗುದ್ದಲಿ) ಆರೋಪಿತನು ಹಾಜರುಪಡಿಸಿದ ಯಲಕೊಟು(ಗುದ್ದಲಿ) ಇದೆ. ಈಗ ನಾನು ನೋಡುತ್ತಿರುವ ನಿಪಿ31 ದಾಖಲೆ ಆ ಸ್ಥಳದಲ್ಲಿ ಮಾಡಿದ ಮಹಜರ್ ಇದ್ದು ಅದರಲ್ಲಿ ನನ್ನ

ಸಹಿ ಇರುತ್ತದೆ. ಸದರಿ ಸಹಿಯನ್ನು ನಿಪಿ31 ಬಿ ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನಿಪಿ32 ರಿಂದ ನಿಪಿ37 ಪೋಟೋಗಳು ನಿಪಿ31 ಮಹಜರ್ ಕಾಲಕ್ಕೆ ತೆಗೆದ ಪೊಟೋ ಇರುತ್ತವೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್.ಇ. ವಕೀಲರಿಂದಃ</u>**

ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುವುದಿಲ್ಲ. ಮಹಜರುಗಳನ್ನು ಪೋಲಿಸರು ಬರೆದರು, ಅವರ ಹೆಸರು ಗೊತ್ತಿಲ್ಲ. ಮಹಜರ್ ಸ್ಥಳದಲ್ಲಿ ಸ್ಥಳಿಯ ಜನರು ಗುಂಪು ಸೇರಿದ್ದರು ಎಂದರೆ ಅವರು ದೂರದಲ್ಲಿದ್ದರು. ಮಹಜರಿನಲ್ಲಿರುವ ವಿಷಯಗಳನ್ನು ನನಗೆ ತಿಳಿಸಿ ನನ್ನ ಸಹಿ ಪಡೆದಿರುತ್ತಾರೆ. ನಿಪಿ13 ಮಹಜರ್ ಮಾಡಿದ ಸ್ಥಳದ ಪೂರ್ವಕ್ಕೆ ಚಾನಲ್ ಇದೆ, ಪಶ್ಚಿಮಕ್ಕೆ ಹೊಸಹಳ್ಳಿಗೆ ಹೋಗುವ ರಸ್ತೆ, ಉತ್ತರಕ್ಕೆ ಚಾನಲ್, ದಕ್ಷಿಣಕ್ಕೂ ಚಾನಲ್ ಇದೆ. ನಾನು ಆ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ22 ಮಹಜರ್ ಮಾಡಿದ ಸ್ಥಳದ ಪೂರ್ವಕ್ಕೆ ಚಾನಲ್ ರಸ್ತೆ ಇದೆ, ಉಳಿದ ಕಡೆ ಏನಿದೆ ಎಂದು ಈಗ ನೆನಪಿಲ್ಲ.

ನಿಪಿ31 ಮಹಜರ್ ಮಾಡಿದ ಸ್ಥಳದ ಪೂರ್ವಕ್ಕೆ ರಸ್ತೆ ಇದೆ, ಪಶ್ಚಿಮಕ್ಕೆ ಬೇರೆಯವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಆರೋಪಿಯ ಮನೆ ಇದೆ. ನಾನು ಹೇಳಿರುವ ಚಕ್ಕುಬಂದಿ

ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆ ಸ್ಥಳಗಳಿಗೆ ಹೋಗದೆ ಠಾಣೆಯಲ್ಲಿ ಸಹಿ ಮಾಡಿ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಕಾಲಕ್ಕೆ ಸೈಕಲ್ ಮತ್ತು ಯಲಕೊಟು (ಗುದ್ದಲಿ)ಯನ್ನು ಅಮಾನತ್ತುಪಡಿಸಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಹಶೀಲ್ದಾರ್ ರವರು ಯಾವ ದಿನ ಆದೇಶ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ನಾನು ಆ ಸ್ಥಳಕ್ಕೆ ಖಾಸಗಿ ಕಾರಿನಲ್ಲಿ ಹೋಗಿದ್ದೆ ಈಗ ಅದರ ನಂಬರ್ ನೆನಪಿಲ್ಲ. ಮಹಜರನ್ನು ಒಬ್ಬ ಪೋಲಿಸರು ಬರೆದರು, ಅವರ ಹೆಸರು ನೆನಪಿಲ್ಲ. ನಾನು ಬೇರೆ ಯಾವುದೇ ಪ್ರಕರಣದಲ್ಲಿ ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ನಾನು ಪದೇ ಪದೇ ಮೂಗೂರು ಠಾಣೆಗೆ ಹೋಗಿ ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಸಮಕ್ಷಮ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.